

ದಾಹ ತೀರುವ ಸಮಯ: ಜ್ಞಾನದಾಹ ತಣಿಸುವ ಜೊತೆಗೆ ಮಕ್ಕಳಿಗೆ ಹಾಲು ನೀಡುವ ಕೆಲಸಕ್ಕೂ ಶಿಕ್ಷಕರು ಸೈ

**ಪೋಷಕರ ಕಣ್ಣಿಗೆ ಸರ್ಕಾರಿ ಶಾಲೆಗಳು ದೊಡ್ಡಿಗಳಂತೆಯೂ ಖಾಸಗಿ ಶಾಲೆಗಳು ಎಲ್ಲ ಸವಲತ್ತುಗಳಿಂದ ಕೂಡಿರುವ ಮಾದರಿ ಶಿಕ್ಷಣ ಕೇಂದ್ರಗಳಂತೆಯೂ ಕಾಣಿಸುತ್ತಿವೆ. ಈ ವಿರೋಧಾಭಾಸಕ್ಕೆ ಖಾಸಗಿ ಶಾಲೆಗಳು ಉತ್ತಮವಾಗಿರುವುದಕ್ಕಿಂತಲೂ ಸರ್ಕಾರದ ತಪ್ಪು ನಿರ್ಧಾರಗಳೇ ಮುಖ್ಯ ಕಾರಣವಾಗಿವೆ.**

ವ್ಯವಸ್ಥೆಯ ಕೊನೆಯ ಕೊಂಡಿ ಆಗಿಬಿಡುವುದನ್ನು ತಪ್ಪಿಸಬೇಕು. ಶಿಕ್ಷಕರಿಗೆ ಶೈಕ್ಷಣಿಕ ಸ್ತರದಲ್ಲಿ ಬಹುಮುಖ್ಯ ಸ್ಥಾನವಿದೆ ಎಂಬುದನ್ನು ಮಾನ್ಯಮಾಡಿ ಗೌರವ ಕೊಡಬೇಕು ಎನ್ನುವುದು ಬೆಹರ್ ಅವರ ಸಲಹೆ.

ಬೆಹರ್ ಅವರ ಅಭಿಪ್ರಾಯವನ್ನು ಒಪ್ಪುವ ಶಿಕ್ಷಕರು, 'ಅನ್ಯ ಕಾರ್ಯಗಳ ಹೊರೆಯನ್ನು ಹೊತ್ತುಕೊಂಡು ಮೂಲ ವೃತ್ತಿಯಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದು ಹೇಗೆ' ಎಂಬ ಪ್ರಶ್ನೆಯನ್ನು ಮುಂದಿಡುತ್ತಾರೆ.

## ಸರ್ಕಾರದ ಹಿಮ್ಮುಖ ನಡಿಗೆ

ನಮ್ಮ ನಡುವಿನ ಪಾಲಕರ ಮುಂದಿರುವ ಈಗಿನ ಬಹುದೊಡ್ಡ ಪ್ರಶ್ನೆಯೆಂದರೆ ತಮ್ಮ ಮಕ್ಕಳು ಓದುವ ಶಾಲೆ ಯಾವುದಾಗಿರಬೇಕು ಎನ್ನುವುದು. ಇದಕ್ಕೆ ಅವರು ಸದ್ಯಕ್ಕೆ ಕಂಡುಕೊಂಡಿರುವ ಉತ್ತರ 'ಖಾಸಗಿ ಶಾಲೆಗಳು'. ಶಿಕ್ಷಣದ ಹಕ್ಕು ಕಾಯ್ದೆಯ ಮೂಲಕ ಸರ್ಕಾರ ಕೂಡಾ 'ಖಾಸಗಿ ಉತ್ತಮ' ಎಂಬ ನಂಬಿಕೆಯನ್ನು ಪರೋಕ್ಷವಾಗಿ ನಂಬಿಸುತ್ತಿದೆ. ಇನ್ನು ಸಾರ್ವಜನಿಕ ಕಾರ್ಯಗಳಲ್ಲಿ ಮುಂಚೂಣಿಯ ಸೇನಾನಿಗಳಾಗಿ ನಿಲ್ಲಬೇಕಾದವರು ಸರ್ಕಾರಿ ಶಾಲೆಗಳ ಶಿಕ್ಷಕರೇ. 'ಸರ್ಕಾರಿ ಶಾಲೆಗಳ ಶಿಕ್ಷಕರು ಪಾಠ ಮಾಡುವುದಕ್ಕಿಂತ ಬೇರೆ ಕೆಲಸ ಮಾಡುವುದೇ ಹೆಚ್ಚು. ಹೀಗಾಗಿ ಅಲ್ಲಿನ ಶಿಕ್ಷಣ ಕಳಪೆ' ಎಂಬ ಅಭಿಪ್ರಾಯ ಕೂಡ ಖಾಸಗಿ ಶಾಲೆಗಳತ್ತ ಪೋಷಕರು ಒಲವು ತೋರಲು ಕಾರಣವಾದಂತಿದೆ.

ಸಮಾನ ಕಡ್ಡಾಯ ಶಿಕ್ಷಣ ಇಂದಿನ ಅಗತ್ಯ. ಇದ್ದವರಿಗೊಂದು ಶಿಕ್ಷಣ, ಇಲ್ಲದವರಿಗೊಂದು ಶಿಕ್ಷಣ ಮಾಡಿ ದಮನಿತ ಮಕ್ಕಳ ಬದುಕಿಗೆ ವ್ಯವಸ್ಥೆ ವಂಚಿಸುತ್ತಿದೆಯೇ ಹೊರತು ಬೇರೇನಲ್ಲ. ನಮ್ಮ ನಾಡು, ನಮ್ಮ ಸಂಸ್ಕೃತಿ ಎಂದೆಲ್ಲ ಮಾತನಾಡುವ ಪ್ರಭುತ್ವ, ಶಿಕ್ಷಣದ ವಿಷಯದಲ್ಲಿ ಮಾತ್ರ 'ನಮ್ಮ ಮಕ್ಕಳು' ಎಂದು ಇಡೀ ನಾಡಿನ ಮಕ್ಕಳನ್ನು ನೋಡುತ್ತಿಲ್ಲ ಎಂಬ ಆಕ್ಷೇಪವೂ ಬಲವಾಗಿ ಕೇಳಿಬರುತ್ತಿದೆ. 'ಸಮಾನ ಶಿಕ್ಷಣಕ್ಕಾಗಿ ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು ಮತ್ತು ಶಿಕ್ಷಕರು ಪೂರ್ಣಾವಧಿಗೆ ಮಕ್ಕಳ ಮಾರ್ಗದರ್ಶನಕ್ಕಾಗಿ ಲಭ್ಯವಾಗಬೇಕು' ಎನ್ನುವುದು ಈ ಚಳವಳಿಯಲ್ಲಿ ತೊಡಗಿಸಿಕೊಂಡವರ ವಾದವಾಗಿದೆ.

ಉನ್ನತಮಟ್ಟದ ಅಧಿಕಾರಶಾಹಿಯಿಂದ ಆರಂಭಿಸಿ ಮಧ್ಯಮ ಮತ್ತು ತಳಮಟ್ಟದ ಅಧಿಕಾರಶಾಹಿ ತನಕದ ವ್ಯವಸ್ಥೆಯು ಶಿಕ್ಷಕರ ಸಮಸ್ಯೆಗೆ ಪರಿಹಾರ ಒದಗಿಸುವುದಕ್ಕಿಂತ ಮತ್ತಷ್ಟು ಜಟಿಲಗೊಳಿಸುತ್ತಿದೆ. ಮಾತ್ರವಲ್ಲ, ಸುಲಿಗೆಗೂ ಇಳಿದಿದೆ (ತಪಾಸಣೆ ಹೆಸರಿನಲ್ಲಿ ಬರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಣದ ದಾಹದ ಕುರಿತು